ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 865/2017

ಚಾಸಾಃ( 04 ) ಪ್ರಾಸಾ ( 02 )

ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ದಿನಾಂಕಃ 02-07-2025

| | |
|---|---|
| ಸಾಕ್ಷಿದಾರರ ಹೆಸರು | ಮಂಜಪ್ಪ |
| ತಂದೆ ಹೆಸರು | ನಾಗಪ್ಪ |
| ವಯಸ್ಸು | 37 ವರ್ಷ, |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮದಿನೂರು |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ದಿಃ 16-06-2017 ರಂದು ನಾನು ಮತ್ತು ಚಾಸಾ 1 ರವರು ಬೆ. 10.00 ಗಂಟೆಗೆ ಜಮೀನಿಗೆ ಹೋದಾಗ ರಿಂದ 4 ನೇ ಅರೊಪಿತರು ನಮ್ಮ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದರು. ಚಾಸಾ 1 ರವರಿಗೆ 4 ನೇ ಆರೋಪಿಯು ಕೈ ಯಿಂದ ಬಡೆದು, ಲೇ ಸೂಳೀ ಮಗನೇ ಎಂದು ಬೈದು, ಇದು ನಮ್ಮ ಜಮೀನು ನಾನೇ ಉಳುವೆ ಮಾಡುತ್ತೇನೆ ಎಂದು ಅವಾಚ್ಯವಾಗಿ ಬೈದಿದ್ದು, ನಂತರ ಚಾಸಾ 5 ರವರು ಬಂದು ಗಲಾಟೆಯನ್ನು ಬಿಡಿಸಿರುತ್ತಾರ. ನಂತರ 1 ರಿಂದ 4 ನೇ ಆರೋಪಿತರು ಬಂದು ನನಗೆ ಮತ್ತು ಚಸಾ 1 ರವರಿಗೆ ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಮತ್ತು ಚಸಾ 1 ರವರು ಜಿಲ್ಲಾ ಆಸ್ಪತ್ರೆಗೆ ಹೋಗಿ ನನ್ನ ತಂದಗೆ ವೈದ್ಯಕೀಯ ಚಿಕಿತ್ಸೆಯನ್ನು ಕೊಡಿಸಿರುತ್ತೇನೆ. ನಂತರ ಈ ಬಗ್ಗೆ ಚಾಸಾ 1 ರವರು ದೂರನ್ನು ದಾಖಲಿಸಿರುತ್ತಾರೆ. ನಂತರ ದಿಃ 21-06-2017 ರಂದು ಗುನ್ನೆಜಾಗಕ್ಕೆ ಬಂದು ನಾನು ಹೇಳಿ ತೋರಿಸಿದ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ಸಂಜೆ 04.00 ರಿಂದ 05.00 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ವಿಷಯವಾಗಿ ನನ್ನ ಹೇಳಿಕೆಯನ್ನು ನೀಡಿರುತ್ತೆನೆ. 4 ನೇ ಅರೋಪಿ ಗೈರು ಹಾಜರು ಅಗಿದ್ದು 4 ನೇ ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿ, ಆರೋಪಿಯನ್ನು ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಹೇಳಿದ್ದು, ಅಕಾರಣ ಅರ್ಜಿಯನ್ನು ಪುರಸ್ಕರಿಸಲಾಗಿರುತ್ತದೆ. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಬಾವಿಸಲಾಯಿತು. 1 ರಿಂದ 3 ನೇ ಆರೋಪಿತರನ್ನು ನೆೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿದಾರ ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಅಂತ ಹಿಸಸಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು, ಪಾಟೀಸವಾಲಿಗೆ ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲುಃ ಸಸಅ ರವರಿಂದಃ</u>**

1 ರಿಂದ 4 ನೇ ಆರೋಪಿತರು ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ನನಗೆ ಅವಾಚ್ಯ ಶಬ್ದಗಳಿಂದು ಬೈದು ನಮಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ</u>**

ಏನೂ ಇಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

**ಹೆ. ಜೆ ಎಂ ಎಫ್ ಸಿ ಕೊಪ್ಪಳ.**